## ಪ್ರಧಾನ ಹೆಚ್ಚುವರಿ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ

## ಸಿ ಸಿ ನಂ. 739/2023

| | | |
|---|---|---|
| ಹೆಸರು | ಸುಚಿತ್ರಾ | PW –1 |
| ಗಂಡನ ಹೆಸರು | ಸಂದೀಪ ಕುಮಾರ | CW –1 |
| ವಯಸ್ಸು | 24 ವರ್ಷ | |
| ಉದ್ಯೋಗ | ಗೃಹಿಣಿ | ದಿನಾಂಕಃ 07.10.2024 |
| ವಾಸ | ಗೆದ್ದಲಟ್ಟಿ ಗ್ರಾಮ, ಚನ್ನಗಿರಿ | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ ಸಸಅ ರವರಿಂದ ಃ**

ಚಾಸಾ .2 ರಿಂದ 7 ರವರ ಪರಿಚಯವಿರುವುದಿಲ್ಲ. ಮೃತ ಸಂದೀಪ ಕುಮಾರ ನನ್ನ ಗಂಡ. ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯವಿಲ್ಲ. ನನ್ನ ಗಂಡ ಮಿಟ್ಲಕಟ್ಟೆ ಗ್ರಾಮದಲ್ಲಿರುವ ಆಕಾಶ್ ರೈಸ್ ಮಿಲ್ ನಲ್ಲಿ ಕೆಲಸ ಮಾಡುತ್ತಿದ್ದರು. ಸುಮಾರು 1 ವರೆ ವರ್ಷಗಳ ಹಿಂದೆ ನನ್ನ ಬಾವ ರವರಿಗೆ, ನನ್ನ ಗಂಡ ರೈಸ್ ಮಿಲ್ ನಲ್ಲಿ ಕೆಲಸ ಮಾಡುವಾಗ ವಿದ್ಯುಚ್ಛಕ್ತಿ ತಗಲಿ ಮೃತ ಪಟ್ಟಿರುತ್ತಾರೆ ಎಂದು ಯಾರೊ ದೂರವಾಣಿ ಕರೆ ಮಾಡಿ ತಿಳಿಸಿದ್ದು, ಸದರಿ ವಿಷಯವನ್ನು ನನ್ನ ಬಾವ ನನಗೆ ತಿಳಿಸಿರುತ್ತಾರೆ. ಆಗ ನಾನು ಮನೆಯಲ್ಲಿ ಇದ್ದೆ. ವಿಷಯ ತಿಳಿದ ನಂತರ ದಾವಣಗೆರೆಯ ಚಿಗಟೇರಿ ಆಸ್ಪತ್ರೆಗೆ ಹೋಗಿ ನೋಡಲಾಗಿ, ನನ್ನ ಗಂಡ ಮೃತ ಪಟ್ಟಿರುವುದು ಕಂಡುಬಂದಿರುತ್ತದೆ. ನಂತರ ಮಾರನೆ ದಿನ ಪೋಲಿಸ್ ಠಾಣೆಗೆ ಹೋಗಿ ದೂರನ್ನು ದಾಖಲಿಸಿರುತ್ತೇವೆ. ಸಾಕ್ಷಿಯು ಸದರಿ ದೂರಿನಲ್ಲಿರುವ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದೂರನ್ನು ನಿಪಿ.1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಸದರಿ ನಿಪಿ.1 ರ ದೂರನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಗಂಡ ಯಾರ ತಪ್ಪಿನಿಂದ ಮೃತ ಪಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

**(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಮಾನ್ಯ ಎ.ಪಿ.ಪಿ ಯವರು ಕೋರಿದ್ದು, ಸಂಗತಿಗಳನ್ನು ಪರಿಶೀಲಿಸಲಾಗಿ ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರಿಗೆ ಪಾಟಿ ಸವಾಲು ಮಾಡಲು ಅನುಮತಿಸಲಾಯಿತು)**

**ಪಾಟೀ ಸವಾಲು ಶ್ರೀ ಎ.ಪಿ.ಪಿ. ಯವರಿಂದಃ**

ದಿನಾಂಕ 07.02.2023 ರಂದು ಮಧ್ಯಾಹ್ನ 2.15 ಗಂಟೆ ಸಮಯದಲ್ಲಿ ನನ್ನ ಗಂಡನ ಅಣ್ಣ, ಅಂದರೆ ನನ್ನ ಮಾವ ಮಧು ಚಾಸಾ.4 ರವರು ಪೋನ್ ಮಾಡಿ ನನ್ನ ಗಂಡ ರೈಸ್ ಮಿಲ್ ನಲ್ಲಿ ಕೆಲಸ ಮಾಡುತ್ತಿರುವಾಗ ಸುಮಾರು 2 ಗಂಟೆ ಸುಮಾರಿಗೆ ನೀರು ಬಿಡಲು ವಾಲ್ ಆನ್ ಮಾಡಲು ಹೋದಾಗ, ಕಿಟಕಿಯನ್ನು ಮುಟ್ಟಿ ಇದ್ದಕ್ಕಿದ್ದಂತೆ ಸಂದೀಪನು ಕೂಗಿಕೊಂಡನು, ಆಗ ನಾನು ಹೋಗಿ ನೋಡಿದಾಗ ಅದರುತ್ತಿದ್ದನು. ಕೂಡಲೇ ನಾನು ಮತ್ತು ಇತರರು ಹತ್ತಿರ ಬಂದು ಅವನಿಗೆ ಹಿಡಿದು ಎಳೆಯಲು ಹೋದಾಗ ನನಗೂ ಕರೆಂಟ್ ಸ್ಪರ್ಷವಾಗಿದ್ದರಿಂದ ಅಲ್ಲಿಯೇ ಇದ್ದ ಪ್ಲಾಸ್ಟಿಕ್ ಪೈಪ್ ನಿಂದ ಸಂದೀಪಗೆ ಹಿಂದಕ್ಕೆ ಎಳದುಕೊಂಡೆವು ಎಂದರೆ ಸರಿಯಲ್ಲ. ನಂತರ ಚಿಕಿತ್ಸೆಗಾಗಿ ದಾವಣಗೆರೆ ಚಿಗಟೇರಿ ಆಸ್ಪತ್ರೆಗೆ ಕರೆದುಕೊಂಡು ಬರುತ್ತಿದ್ದೇವೆ ಎಂಬ ವಿಷಯವನ್ನು ನನ್ನ ಗಂಡನ ಅಣ್ಣ ಸಂತೋಷನು ನನಗೆ ತಿಳಿಸಿದರು ಎಂದರೆ ಸರಿಯಲ್ಲ.

ನಂತರ ಘಟನೆಯ ಬಗ್ಗೆ ಮಧು, ರಾಜಪ್ಪ, ರಾಕೇಶ್, ಶ್ರೀನಿವಾಸರವರುಗಳಿಗೆ ವಿಚಾರ ಮಾಡಿದಾಗ ರೈಸ್ ಮಿಲ್ ಕಂಪೌಂಡ್ ಲೈಟ್ ಹಾಕಿದ್ದು, ಕಿಟಕಿ ಮೂಲಕವಾಗಿ ವಿದ್ಯುತ್ ವೈರ್ ಹಾಕಿದ್ದು, ಸದರಿ ಕಿಟಕಿಯ ಹತ್ತಿರ ನೀರಿನ ಪೈಪ್ ಹಾದು ಹೋಗಿದ್ದು, ಅದೇ ಕಿಟಕಿಯ ಹತ್ತಿರ ವಾಲ್ ಇದ್ದು, ಸದರಿ ವಾಲ್ ನ್ನು ಸಂದೀಪನು ಆನ್ ಮಾಡಲು ಹೋದಾಗ, ಕಿಟಕಿಯಲ್ಲಿದ್ದ ವೈರ್ ಡ್ಯಾಮೇಜ್ ಆಗಿ ಕಿಟಕಿಗೆ ವಿದ್ಯುತ್ ಹರಿದು, ಅದನ್ನು ಮುಟ್ಟಿದಾಗ

ಸಂದೀಪಗೆ ಕರೆಂಟ್ ಹೋಡೆಯಿತು, ಆಗ ಆಸ್ಪತ್ರೆಗೆ ದಾಖಲಿಸಿದ್ದಾಗ ಮೃತ ಪಟ್ಟಿರುವುದಾಗಿ ಮೃತ ಪಟ್ಟಿರುತ್ತಾರೆ ಅಂತ ತಿಳಿಸಿರುತ್ತಾರೆ ಅಂತ ತಿಳಿಸಿದರು ಎಂದರೆ ಸರಿಯಲ್ಲ.

ನಂತರ ರೈಸ್ ಮಿಲ್ ಕಿಟಕಿಗೆ ಹಾದು ಹೋಗಿರುವ ವಿದ್ಯೂತ್ ವೈರ್ ಡ್ಯಾಮೇಜ್ ಆಗಿ ಅದಕ್ಕೆ ಟೇಪ್ ಸುತ್ತಿದ್ದು, ಇದರಿಂದ ಕಿಟಕಿಗೆ ವಿಧ್ಯೂತ್ ಸ್ಪರ್ಷವಾಗಿ ಪ್ರಾಣ ಹಾನಿ ಸಂಭವಿಸಿರುತ್ತದೆ ಎಂದು ಆರೋಪಿತರಿಗೆ ಗೊತ್ತಿದ್ದರ ಸಹ ಯಾವುದೇ ಮುಂಜಾಗೃತೆ ಕ್ರಮಗಳನ್ನು ಕೈಗೊಳ್ಳದೆ ನಿರ್ಲಕ್ಷತೆ ಮತ್ತು ಬೇಜವಾಬ್ದಾರಿತನ ತೋರಿಸಿ ನನ್ನ ಗಂಡನಿಗೆ ಯಾವುದೇ ಸೂಕ್ತ ರಕ್ಷಣಾ ಸಲಕರಣೆಗಳನ್ನು ನೀಡದೆ ಇದ್ದುದರಿಂದ ನನ್ನ ಗಂಡ ಕರೆಂಟ್ ಹೊಡೆದು ಮೃತ ಪಟ್ಟಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದ ಃ ಇಲ್ಲ.**

**ಮರುವಿಚಾರಣೆ ಇಲ್ಲಃ**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಮ್ಎಫ್ ಸಿ ನ್ಯಾಯಾಲಯ, ಹರಿಹರ.